**2ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ**

**ಸಿ.ಸಿ.ನಂಃ 461/2015**

| | | | |
|---|---|---|---|
| **ಸಾಕ್ಷಿದಾರನ ಹೆಸರು** | **ಮೋಹನ್ ಡಿ ಪಟೇಲ್** | **ಸಿ ಡಬ್ಲ್ಯು** | **1** |
| **ತಂದೆ ಹೆಸರು** | **ದೊಡ್ಡೇಗೌಡ** | **ಪಿ ಡಬ್ಲ್ಯು** | **1** |
| **ವಯಸ್ಸು** | **39 ವರ್ಷ** | | |
| **ಉದ್ಯೋಗ** | **ಪಿಐ, ರಾಜ್ಯಗುಪ್ತ ವಾರ್ತೆ ದಳ** | | |
| **ವಾಸಸ್ಥಾನ** | **ಬೆಂಗಳೂರು** | | |

**ಸಾಕ್ಷಿಯನ್ನು ಈ ದಿಃ 03.01.2022 ರಂದು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು ಃ**

**ಮುಖ್ಯ ವಿಚಾರಣೆ ಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ-**

ಡಿಸೆಂಬರ್ 2012 ರಿಂದ ಮೇ 2016 ರವರೆಗೆ ನಾನು ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿಃ 19.08.2013 ರಂದು ಬೆಳಿಗ್ಗೆ 10.30 ಗಂಟೆಗೆ ಠಾಣೆಯಲ್ಲಿದ್ದಾಗ ಬಾತ್ಮಿದಾರರು ನನಗೆ ಸಂಪರ್ಕಿಸಿ ಸೋಮೇಶ್ವರನಗರ 9 ನೇ ಕ್ರಾಸ್ ಯಲ್ಲಮ್ಮ ದೇವಸ್ಥಾನದ ಬಳಿ ನಿರ್ಮಾಣ ಹಂತದಲ್ಲಿರುವ ಅಪಾರ್ಟ್ಮೆಂಟ್ ಕುಸಿದಿರುವ ಬಗ್ಗೆ ಮಾಹಿತಿ ತಿಳಿಸಿದ ಮೇರೆಗೆ ಸದರಿ ಮಾಹಿತಿಯನ್ನು ಠಾಣಾ ಪಿಐ ರವರಿಗೆ ನಿವೇದಿಸಿಕೊಂಡು ಬೀಟ್ ಸಿಬ್ಬಂದಿ ಮತ್ತು ಹೊಯ್ಸಳ ಸಿಬ್ಬಂದಿ ಅವರಿಗೆ ಬರಲು ಸೂಚಿಸಿ ನಾನು ಸಿಬ್ಬಂದಿಯೊಂದಿಗೆ ಸದರಿ ಸ್ಥಳಕ್ಕೆ ಹೋಗಿ ಅಲ್ಲಿ ಸೇರಿದ್ದ ಜನರನ್ನು ಸಿಬ್ಬಂದಿಗಳ ಸಹಾಯದಿಂದ ಪಕ್ಕಕ್ಕೆ ಸರಿಸಿ ಹಾಗೂ ಸದರಿ ಕಟ್ಟಡ ಕುಸಿದಿದ್ದರಿಂದ ಗಾಯವಾಗಿದ್ದವರನ್ನು ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ಸ್ಥಳವು ಜಯನಗರ 1 ನೇ ಬ್ಲಾಕ್, ಸೋಮೇಶ್ವರನಗರ 9 ನೇ ಕ್ರಾಸ್ ನಲ್ಲಿರುವ ಯಲ್ಲಮ್ಮ ದೇವಸ್ಥಾನದ ಬಳಿ ಇರುವ ಸೈಟ್ ನಂ.49 ರಿಂದ 54 ರವರೆಗೆ 65 * 180 ಚದರಿ ಅಡಿಯಲ್ಲಿ ನಿರ್ಮಾಣವಾಗಿರುವ ಅಪಾರ್ಟ್ಮೆಂಟ್ ಕಟ್ಟಡವಾಗಿದ್ದು ಸದರಿ 6 ಅಂತಸ್ತಿನ ಪೈಕಿ ನೆಲಮಹಡಿ ಪೂರ್ತಿ ಕುಸಿದು ಒಳ ಹೋಗಿದ್ದು ಮೊದಲನೇ ಮಹಡಿಯ ಭಾಗ ಮಾತ್ರ ಗೋಚರವಾಗಿತ್ತು ಸದರಿ ವಿಷಯವನ್ನು ಮೇಲಧಿಕಾರಿ ಮತ್ತು ಅಗ್ನಿಶಾಮಕ ದಳಕ್ಕೆ ತಿಳಿಸಿದ್ದು, ಮತ್ತು ಅಲ್ಲಿಯೇ ಇದ್ದ ಕೂಲಿ ಕಾರ್ಮಿಕರಾದ ಹನುಮಂತರವನ್ನು

ಸದರಿ ಕಟ್ಟಡ ಕುಸಿದ ಬಗ್ಗೆ ವಿಚಾರಿಸಲಾಗಿ ಈ ಕಟ್ಟಡ ನಿರ್ಮಾಣಕ್ಕೆ ವಿವಿಧ ರಾಜ್ಯಗಳಿಂದ ಕೂಲಿ ಕಾರ್ಮಿಕರು ಕೆಲಸ ಮಾಡುತ್ತಿದ್ದು ಕೆಲಸ ಮುಗಿದ ಮೇಲೆ ರಾತ್ರಿ ಅದೇ ಕಟ್ಟಡದ ನೆಲಮಹಡಿಯಲ್ಲಿ ವಾಸಿಸಲು ಮಾಲೀಕರು ತಿಳಿಸಿದ್ದರಿಂದ ಅವರೆಲ್ಲರೂ ಅಲ್ಲಿಯೇ ಉಳಿದುಕೊಳ್ಳುತ್ತಿದ್ದರು ಎಂದು ತಿಳಿಸಿದ್ದು, ಬೆಳಿಗ್ಗೆ 10.00 ಗಂಟೆ ಸಮಯಕ್ಕೆ ಕೆಲಸ ಮಾಡಲು ಸಿದ್ಧತೆ ಮಾಡುತ್ತಿದ್ದ ಸಮಯದಲ್ಲಿ ಬಿಲ್ಡಿಂಗ್ ಬಿರುಕು ಬಿಡುವ ಭಾರೀ ಶಬ್ದ ಕೇಳಿ ಹನುಮಂತ ತನ್ನ ತಾಯಿ ನಾಗಮ್ಮ ಹಾಗೂ ಅವನ ಸಹೋದರರ ಜೊತೆ ಸದರಿ ಕಟ್ಟಡದಿಂದ ಓಡಿ ಬರುವಾಗ ತನ್ನ ತಾಯಿ ಬರಲಾಗದೇ ಒಳಗಡೆ ಸಿಲುಕಿಕೊಂಡಿದ್ದು ಅದೇ ರೀತಿ ಇನ್ನಿತರರು ಸಿಲುಕಿಕೊಂಡಿದ್ದು ಎಂದು ತಿಳಿಸಿದ್ದು, ಸದರಿ ಘಟನೆಯಲ್ಲಿ ಗಾಯಗೊಂಡ ಸುಮಾರು 16 ಜನರಾದ ಲಕ್ಷಣ್ ಪಾಸ್ವಾನ್, ಸಂಜಯ್, ಸುಶಾಂತ್, ಲಾಲುಕುಮಾರ್, ಗೌರಿಂಗೋ ಬಾಸ್ವಾನ್, ಮೋಹಂತೋ, ಅಪ್ಸರ್ ಪಾಷಾ, ಅಜಯ್, ರಾಜನ್ ಬರ್ಮಾನ್, ಮನೋಜ್ ಬರ್ಮಾನ್, ಪ್ರದೀಪ್ ಬರ್ಮಾನ್ ರವರನ್ನು ಚಿಕಿತ್ಸೆಗೆ ಕಳುಹಿಸಿಕೊಟ್ಟು, ನಂತರ ಅಗ್ನಿಶಾಮಕ ದಳದ ಅಧಿಕಾರಿಗಳ ಸಹಾಯದಿಂದ ಒಂದು ಮೃತ ದೇಹವನ್ನು ಹೊರ ತೆಗೆದಿದ್ದು ಅವರ ಹೆಸರು ನೇಪಾಳಿ ಪಾಸ್ವಾನ್ ಆಗಿದ್ದು ಬಿಹಾರ್ ರಾಜ್ಯದವರು ಎಂದು ತಿಳಿದುಬಂದಿರುತ್ತದೆ. ಇನ್ನೂ ಮೃತ ದೇಹಗಳು ಸಿಲುಕಿಕೊಂಡಿರುತ್ತವೆ ಎಂದು ಕಾರ್ಮಿಕರು ತಿಳಿಸಿರುತ್ತಾರೆ. ನಂತರ ಕಟ್ಟಡ ಕಟ್ಟಿಸಿದ್ದ ಕಾಂಟ್ರಾಕ್ಟರ್ ಇಂಜಿನಿಯರ್ ಸ್ಥಳದಲ್ಲಿ ಇರಲಿಲ್ಲ. ಕಟ್ಟಡ ಮಾಲೀಕರ ಬಳಿ ಮಾಹಿತಿ ಪಡೆದಾಗ ಸಲೀಂ ಕಟ್ಟಡ ಕಟ್ಟಿಸುತ್ತಿದ್ದಾರೆ ಎಂದು ಕಟ್ಟಡದ ಮಾಲೀಕತ್ವದ ಪಾಲುದಾರರಾಗಿ ಅಂಜುಂ ಪಾಷಾ, ಮೊಹಮ್ಮದ್ ಅಲಿ, ಸುಲೇಮಾನ್ ಹಾಗೂ ಇತರರು ಇರುತ್ತಾರೆ ಎಂದು ತಿಳಿದುಬಂದಿರುತ್ತದೆ. ಇವರು ಬಿಬಿಎಂಪಿ ಇಲಾಖೆಯಿಂದ ಜಿ ಪ್ಲಸ್ 2 ಕಟ್ಟಡ ಕಟ್ಟಲು ಅನುಮತಿ ಪಡೆದಿದ್ದು, ಅದರೆ ಅದರಂತೆ ಕಟ್ಟದೇ ನಿಯಮವನ್ನು ಉಲ್ಲಂಘಿಸಿ ಅದಕ್ಕಿಂತ ಹೆಚ್ಚಿನ ಅಂತಸ್ತುಗಳನ್ನು ನಿರ್ಮಾಣ ಮಾಡಿದ್ದು ಕಳಪೆ ಕೆಲಸ ಮಾಡಿ ಯೂವ ಹಂತದಲ್ಲಿಯೂ ಕಟ್ಟಡ ಕುಸಿದು ಮಾನವ ಹಾನಿ ಆಗುವ ಸಾಧ್ಯತೆ ಇದ್ದರೂ ಕೂಡ ನಿರ್ಲಕ್ಷತನದಿಂದ ಈ ಘಟನೆ ಸಂಭವಿಸಿರುತ್ತದೆ. ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲು ವರದಿ ಮಾಡಿರುತ್ತೇನೆ

ವರದಿಯನ್ನು ನಿಪಿ.1 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ನಂತರ ಪಿಐ ರವರಿಗೆ ಸ್ಥಳ ಪಂಚನಾಮೆ ಸಮಯದಲ್ಲಿ ಸ್ಥಳ ತೋರಿಸಿದ್ದು ಸದರಿ ದಾಖಲೆಯನ್ನು ನಿಪಿ.2 ಎಂದು ಗುರುತಿಸಲಾಯಿತು. ಅದೇ ದಿನ ಮೃತ ನೇಪಾಳಿ ಪಾಸ್ವಾನ್‌ನ ಶವ ತನಿಖಾ ವರದಿಯನ್ನು ಪಂಚರಾದ ಚಾ.ಸಾ.14 ರಿಂದ 16 ರವರ ಸಮಕ್ಷಮ ಪಿಐ ರವರ ಸೂಚನೆ ಮೇರೆಗೆ ಜರುಗಿಸಿದ್ದೇನೆ. ಸದರಿ ಪಂಚನಾಮೆಯನ್ನು ನಿಪಿ.3 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ನಂತರ ಪಿಐ ರವರ ಮೌಖಿಕ ಆದೇಶದ ಮೇರೆಗೆ ಚಾ.ಸಾ.17 ಮತ್ತು 18 ರವರ ಹೇಳಿಕೆ ದಾಖಲಿಸಿದ್ದೇನೆ. ನಂತರ ಸದರಿ ಮೃತ ದೇಹವನ್ನು ಪಿಸಿ 9456 ರವರ ಜೊತೆ ಶವಾಗಾರಕ್ಕೆ ಕಳುಹಿಸಿಕೊಟ್ಟಿದ್ದೇನೆ. ನಂತರ ದಿಃ 20.08.2013 ರಂದು ಪಿ.ಎಂ ವರದಿ ಆದ ನಂತರ ಶವವನ್ನು ವಾರಸುದಾರರಿಗೆ ನೀಡಿದ್ದೇನೆ.

**ಪಾಟೀ ಸವಾಲುಃ** ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.

**( ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸ ಇದೆ**

**2ನೇ ಅ ಮು ಮ ದಂ.**